ಆಗಿದೆ. ಅದೇ ರೀತಿಯಲ್ಲಿ 2005–06ನೇ ಸಾಲಿನಲ್ಲಿ ಹಿರಿಯೂರು ತಾಲ್ಲೂಕಿಗೆ 3054 ಲೆಕ್ಕಶೀರ್ಷಿಕೆಯಲ್ಲಿ ಜಿಲ್ಲಾ ಪಂಚಾಯತ್‌ಗೆ 37.7 ಲಕ್ಷ ರೂಪಾಯಿಗಳು, ಮತ್ತು ಲೆಕ್ಕ ಶೀರ್ಷಿಕೆಯಡಿ 5054ರಡಿಯಲ್ಲಿ 10 ಲಕ್ಷ ರೂಪಾಯಿಗಳನ್ನು ಹಂಚಿಕೆ ಮಾಡಿದ್ದೇವೆ. ಅದು ಅಲ್ಲದೇ ಹೊಸ ಸೇತುವೆ, ಮತ್ತು ಮೋರಿಗಳಿಗೆ ಚಿತ್ರದುರ್ಗ ಜಿಲ್ಲೆಗೆ 19.13 ಲಕ್ಷ ರೂಪಾಯಿ ಮತ್ತು ಹಳ್ಳಿಕೆರೆ, ಧರ್ಮಪುರಿ ರಸ್ತೆಗಳಿಗೆ 30 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಈಗ ಕೊಟ್ಟಿರುವಂತಹ ಜಿಲ್ಲಾ ಪಂಚಾಯತ್ ಅನುದಾನದಲ್ಲಿ ಆದ್ಯತೆಯ ಮೇಲೆ ಮಾಡಲು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಜಗದೀಶ್ ಮೆಟಗುಡ್: ಮಾನ್ಯ ಉಪಾಧ್ಯಕ್ಷರೇ, ಇವತ್ತು ಜಿಲ್ಲಾ ಪಂಚಾಯತ್‌ನ ಯಾವ ರಸ್ತೆಯೂ ಸಹ ರಿಪೇರಿ ಇಲ್ಲದೇ ಬಹಳ ಹಾಳಾಗಿ ಹೋಗಿದೆ. ಇಡೀ ನಮ್ಮ ಶಿವಮೊಗ್ಗ ಜಿಲ್ಲೆ ಇರಬಹುದು. ಬೇರೆ ಯಾವುದೇ ಜಿಲ್ಲೆ ಇರಬಹುದು. ಯಾವ ಜಿಲ್ಲೆಯಲ್ಲೂ ಒಂದು ರೋಡ್ ಸಹ ಜಿಲ್ಲಾ ಪಂಚಾಯತ್‌ನದ್ದು ಸರಿಯಾಗಿಲ್ಲ. ಇದರ ಬಗ್ಗೆ ಏಕೆ ಇನ್ನೂ ಕ್ರಮವನ್ನು ತೆಗೆದುಕೊಂಡಿಲ್ಲ?

ಶ್ರೀ ಹೆಚ್.ಪಿ. ಮಹದೇವಪ್ಪ: ಮಾನ್ಯ ಉಪಾಧ್ಯಕ್ಷರೇ, ಸುಮಾರು ಹಳ್ಳಿಗಳ ರಸ್ತೆಗಳು ಹೆಚ್ಚು ಕಡಿಮೆ ತೊಂದರೆಯಲ್ಲೇ ಇವೆ. ಪಿಎಂಜಿಎಸ್ ಮತ್ತು ಅದೇ ಆಧಾರದ ಮೇಲೆ ಸಿಎಂಜಿಎಸ್ ಅನ್ನು ಮೊದಲನೆಯ ಬಾರಿಗೆ ಕರ್ನಾಟಕ ರಾಜ್ಯದಲ್ಲಿ, ಕಳೆದ ವರ್ಷ ಮತ್ತು ಈ ಸಾರಿ ಪ್ರಧಾನಮಂತ್ರಿ ಗ್ರಾಮಸಡಕ್ ಯೋಜನೆಯಂತೆ, ಮುಖ್ಯಮಂತ್ರಿ ಗ್ರಾಮ ಸಡಕ್ ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆ. ಆದರೆ ಕೊಡತಕ್ಕಂಥ ಹಣದಲ್ಲಿ ಈ ಸುಮಾರು 1,15,000 ಕಿ.ಮೀ. ಉದ್ದವಿರುವ ಈ ಗ್ರಾಮೀಣ ರಸ್ತೆಗಳನ್ನು, ಒಮ್ಮೆಲೆ ನಾವು ಮಾಡುವುದಕ್ಕೆ ಸಾಧ್ಯವಾಗದೇ ಹೋದರೂ, ಓಡಾಡುವುದಕ್ಕೆ ತೊಂದರೆಯಾದಾಗ ಜಿಲ್ಲಾಪಂಚಾಯತ್ ಶೀರ್ಷಿಕೆಯಡಿ ಕೊಡುವಂತಹ ಅನುದಾನವನ್ನು ಬಳಸಿಕೊಂಡು, ಎಸ್‌ಜಿಆರ್‌ವೈ, ಎಸ್‌ಜಿಆರ್‌ವೈ ಮತ್ತು ಬೇರೆ ಬೇರೆ ಕಾರ್ಯಕ್ರಮಗಳ ಮೂಲಕ ಮಾಡತಕ್ಕಂಥ, ಪ್ರಯತ್ನಗಳು ನಡೆದರೂ ಕೂಡ ಮಾನ್ಯ ಸದಸ್ಯರ ಅಭಿಪ್ರಾಯದಂತೆ ಇದಕ್ಕೆ ಇನ್ನೂ ಹೆಚ್ಚಿನ ಹಣ ಬೇಕಾಗುತ್ತದೆ. ಇಡೀ ರಾಜ್ಯದ ಎಲ್ಲಾ ಜಿಲ್ಲಾ ರಸ್ತೆಗಳ ಒಂದು ಪಟ್ಟಿಯನ್ನು ತಯಾರು ಮಾಡಿದ್ದೇವೆ. ಅದರ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಕ್ರಮ ತೆಗೆದುಕೊಳ್ಳುವ ಬಗ್ಗೆ ಪ್ರಯತ್ನಗಳನ್ನು ಮಾಡುತ್ತೇವೆ.

ಅನುದಾನಿತ, ಅನುದಾನರಹಿತ ಶಾಲೆಯ ಶಿಕ್ಷಕರ ಭದ್ರತೆ

650 (6642) ಶ್ರೀ ಕೆ. ರಘುಪತಿ ಭಟ್ (ಉಡುಪಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅನುದಾನರಹಿತ ಶಾಲೆಯ ಶಿಕ್ಷಕರಿಗೆ ಉದ್ಯೋಗ ಭದ್ರತೆ ನೀಡಿ ಕನಿಷ್ಠ ವೇತನ ನೀಡಲು ಸರ್ಕಾರ ಯೋಚಿಸಿದೆಯೇ;

ಆ) ಅನುದಾನಿತ ಶಾಲೆಗಳಲ್ಲಿ ಶಿಕ್ಷಕರ ಖಾಲಿ ಹುದ್ದೆ ತುಂಬಲು ಸರ್ಕಾರ ಏನು ಕ್ರಮ ಕೈಗೊಂಡಿದೆ;

ಇ) ಅನುದಾನರಹಿತ, ಅನುದಾನಿತ ಹಾಗೂ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ಸಮಾನಾಂತರವಾಗಿ ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಸೆಕ್ಷನ್ 1 (3)ರ ಪ್ರಕಾರ ಅದು ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ಅನ್ವಯವಾಗುತ್ತದೆ. ಸೆಕ್ಷನ್ 2 (14)ರಲ್ಲಿ ಒಳಗೊಂಡ ಪರಿಭಾಷೆಯ ಪ್ರಕಾರ ಶಿಕ್ಷಣ ಸಂಸ್ಥೆಗಳು ಅಂದರೆ, ಖಾಸಗಿ ಶಿಕ್ಷಣ ಸಂಸ್ಥೆಗಳೂ ಒಳಗೊಂಡಿರುತ್ತವೆ. ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳ ನೌಕರರುಗಳಿಗೆ ಸದರಿ ಅಧಿನಿಯಮದ ಸೆಕ್ಷನ್ 90 ಮತ್ತು 92ರ ಪ್ರಕಾರ ಸೇವಾ ಭದ್ರತೆ ಲಭ್ಯವಿರುತ್ತದೆ. ಸೆಕ್ಷನ್ 92 (1) (ಬಿ) ರನ್ವಯ ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಯ ಶಿಕ್ಷಕನನ್ನು ಅಥವಾ ಇತರ ನೌಕರರನ್ನು, ಅವನ/ಅವಳ ವಿರುದ್ಧ ಮಾಡಲಾದ ದೋಷಾರೋಪಣೆಗಳನ್ನು ಅವನಿಗೆ/ಅವಳಿಗೆ ತಿಳಿಸಿದ ಮತ್ತು ಅವನು/ಅವಳು ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟು ವಿಚಾರಣೆ ನಡೆಸದೆ ಮಾಡುವಂತಿಲ್ಲ.

ದಿನಾಂಕ: 13.02.2003ರ ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 27 ಎಸ್‌ಇಪಿ 2003ರಲ್ಲಿ ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಯ ಸೇವಾ ಭದ್ರತೆಯ ಬಗ್ಗೆ ಸೇವಾ ವಹಿಗಳನ್ನು ನಿರ್ವಹಿಸಬೇಕೆಂದು ಸೂಚನೆಗಳನ್ನು ನೀಡಲಾಗಿದೆ. ಅನುದಾನ ರಹಿತ ಶಾಲೆಗಳಲ್ಲಿನ ಶಿಕ್ಷಕರಿಗೆ ಕನಿಷ್ಠ ವೇತನ ನಿಗದಿಪಡಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಆ) ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣ, ಬಡ್ತಿ ಇತ್ಯಾದಿ ಕಾರಣಗಳಿಗಾಗಿ ಖಾಲಿಯಾಗುವ (ಅನುದಾನಕ್ಕೆ ಒಳಪಡಿಸಿರುವ) ಹುದ್ದೆಗಳನ್ನು ತುಂಬುವುದಕ್ಕೆ ಸಂಬಂಧಿಸಿದಂತೆ, ಸದರಿ ಶಾಲೆಗಳ, ನಿಗದಿತ, ನಿರ್ದಿಷ್ಟ ಗುರಿಗಳ: ಮಾನದಂಡಗಳ ಸಾದನೆಯ ಆಧಾರದ ಮೇಲೆ ಅವುಗಳ ಕಾರ್ಯ ನಿರ್ವಹಣೆಯ ಮೌಲ್ಯಮಾಪನ ಮಾಡಲು ಹಾಗೂ ಅದನ್ನು ಅವಲಂಬಿಸಿ, ಅವುಗಳನ್ನು ತುಂಬಲು ಅನುಮತಿ ನೀಡಲು ಸೂಕ್ತ ಆಸ್ಪದ ಕಲಿಸುವ ಬಗ್ಗೆ ಶಿಕ್ಷಣ ಇಲಾಖೆಯಿಂದ ಪರಿಶೀಲಿಸಲಾಗುವುದು. ಉತ್ತಮ ಕಾರ್ಯನಿರ್ವಹಣೆ ಮಾಡುವ ಸಂಸ್ಥೆಗಳಿಗೆ ಉತ್ತೇಜಿಸಲು ಆಸ್ಪದವಾಗುವಂತೆ ಕಾರ್ಯನಿರ್ವಹಣೆಯನ್ನು ಆಧಾರವಾಗಿಟ್ಟುಕೊಂಡು ನೇಮಕಾತಿ ಅನುಮೋದನೆಗಳನ್ನು ಆರ್ಥಿಕ ಇಲಾಖೆಯ ಸಹಮತಿ ಪಡೆದು ಮಾಡಲಾಗುವುದು.

ಇ) ಸಧ್ಯಕ್ಕೆ ಈ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.

ಶ್ರೀ ಕೆ. ರಘುಪತಿಭಟ್: ಮಾನ್ಯ ಉಪಾಧ್ಯಕ್ಷರೇ, ನಾನು ಮಾನ್ಯ ಸಚಿವರಲ್ಲಿ ಅನುದಾನರಹಿತ ಶಾಲೆಯ ಶಿಕ್ಷಕರದ್ದು ಮತ್ತು ಅನುದಾನಿತ ಶಾಲೆಯ ಶಿಕ್ಷಕರ ಸಮಸ್ಯೆಯ ಬಗ್ಗೆ ಕೇಳಿದ್ದೆ. ಈ ಎರಡರಲ್ಲೂ ಸ್ವಲ್ಪ ಸರ್ಕಾರ ಇಚ್ಛಾಶಕ್ತಿಯನ್ನು ಪ್ರದರ್ಶಿಸುವಂತಹ, ಅವಶ್ಯಕತೆ ಇದೆಯೆಂದು ಭಾವಿಸುತ್ತೇನೆ. ಇದು ಬಹಳ ವರ್ಷಗಳಿಂದ ಸಮಸ್ಯೆ ಇರುವಂಥಾದ್ದು. ಮಾನ್ಯ ಸಚಿವರು ಒಳ್ಳೆಯ ಕ್ರಿಯಾಶೀಲರಾಗಿ ಕೆಲಸ ಮಾಡುವವರು, ಅವರ ಬಗ್ಗೆ ನಮಗೆ ಗೌರವ ಇದೆ. ಅವರ ಸಮಯದಲ್ಲಿ ಆದರೂ ಈ ಸಮಸ್ಯೆ ಪರಿಹಾರವಾಗಬೇಕೆಂದು ಒಂದು ವಿನಂತಿ. ಮೊದಲನೆಯದಾಗಿ ಈ ಅನುದಾನರಹಿತ ಶಾಲೆಯ ಶಿಕ್ಷಕರು, ನಾನು ಇಲ್ಲಿ ಇಂಗ್ಲಿಷ್ ಮಿಡಿಯಮ್ ಶಾಲೆಗಳಿಗೆ ಶಿಕ್ಷಕರನ್ನು ಖಾಯಂ ಮಾಡಿ, ಅಥವಾ ಅವರಿಗೆ ಅನುದಾನವನ್ನು ಕೊಡಿಯೆಂದು ಕೇಳುವುದಿಲ್ಲ. ನಮ್ಮ ರಾಜ್ಯದಲ್ಲಿರುವ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಯಾರೂ ಡೊನೇಷನ್ ತೆಗೆದುಕೊಳ್ಳುವುದಿಲ್ಲ. ಇಂಗ್ಲಿಷ್ ಮೀಡಿಯಂ ಶಾಲೆಗಳಲ್ಲಿ ಡೊನೇಷನ್

ತೆಗೆದುಕೊಳ್ಳಬಹುದು. ಆದ್ದರಿಂದ, ಕನ್ನಡ ಮಾಧ್ಯಮದ ಶಾಲೆಗಳಲ್ಲಿರುವ ಶಿಕ್ಷಕರಿಗಾದರೂ ಸರ್ಕಾರದಿಂದ ಅನುದಾನ ಕೊಡುವಂಥ ಕೆಲಸವನ್ನು ಮಾಡಬೇಕು. ಏಕೆಂದರೆ, ಕನ್ನಡ ಮಾಧ್ಯಮ ಶಾಲೆಗಳಿಗೆ ಯಾರೂ ಡೊನೇಷನ್ ಕೊಡುವಂಥ ಪರಿಸ್ಥಿತಿಯಲ್ಲಿ ಇಲ್ಲ. ಆದ್ದರಿಂದ, ತಾವು ಅವರಿಗೆ ಅನುದಾನವನ್ನು ಕೊಡಬೇಕು ಎನ್ನುವ ವಿನಂತಿಯನ್ನು ಮಾಡುತ್ತೇನೆ.

ಇನ್ನು ಅನುದಾನಿತ ಶಾಲೆಗಳಲ್ಲಿರುವ ಶಿಕ್ಷಕರ ಖಾಲಿ ಹುದ್ದೆಗಳನ್ನು ತುಂಬುವುದಕ್ಕೆ ಸಂಬಂಧಿಸಿದ ನನ್ನ ಪ್ರಶ್ನೆಗೆ ತಾವು ಏನು ಉತ್ತರ ಕೊಟ್ಟಿದ್ದೀರಿ ಎಂದರೆ, 'ಈ ಹುದ್ದೆಗಳು ಹೊಸದಾಗಿ ಸೃಷ್ಟಿಸಿದ್ದಂಥಾದ್ದಲ್ಲ. ಖಾಲಿ ಇರುವಂಥ ಹುದ್ದೆಗಳನ್ನು ತುಂಬುವುದಕ್ಕೆ ನಿರ್ದಿಷ್ಟ ಗುರಿಗಳು, ಮಾನದಂಡಗಳ ಸಾಧನೆಯ ಆಧಾರದ ಮೇಲೆ ಅವುಗಳ ಕಾರ್ಯನಿರ್ವಹಣಾ ಮೌಲ್ಯಮಾಪನ ಮಾಡಲಾಗುವುದು. ಅದನ್ನು ಅವಲಂಬಿಸಿ ಅವುಗಳನ್ನು ತುಂಬಲು ಅನುಮತಿ ನೀಡಲಾಗುವುದು' ಎಂದು ಉತ್ತರ ಕೊಟ್ಟಿದ್ದೀರಿ. ಇದರಿಂದಾಗಿ ಪುನಃ ಸಮಸ್ಯೆಯಾಗಬಹುದು. ನಾನು ಇವತ್ತು ಹೇಳುವುದೇನೆಂದರೆ ಕನ್ನಡ ಮಾಧ್ಯಮದ ಅನುದಾನಿತ ಶಾಲೆಗಳಿಗೆ ತಕ್ಷಣ ಶಿಕ್ಷಕರನ್ನು ತುಂಬಿಸಲನುವಾಗುವಂತೆ, ಹಾಕಿರತಕ್ಕಂಥ ಆರ್ಥಿಕ ದಿಗ್ಬಂಧನವನ್ನು ತೆಗೆಯಬೇಕು. ಮೊನ್ನೆ ಬೇಡಿಕೆಯ ಮೇಲೆ ಮಾತನಾಡುವಂಥ ಸಂದರ್ಭದಲ್ಲಿ, ತಾವು ಆರ್ಥಿಕ ದಿಗ್ಬಂಧನವನ್ನು ತೆಗೆಯಲಾಗಿದೆ ಎಂದು ಹೇಳಿದಿರಿ. ಆದರೆ ಈಗ ಉತ್ತರ ಕೊಡುವಂಥ ಸಂದರ್ಭದಲ್ಲಿ ಮತ್ತೆ 'ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆದು ಮಾಡಲಾಗುವುದು' ಎನ್ನುವ ಉತ್ತರವನ್ನು ಕೊಟ್ಟಿದ್ದೀರಿ. ಇದು ಸರಿಯಲ್ಲ. ಆರ್ಥಿಕ ದಿಗ್ಬಂಧನವನ್ನು ತೆಗೆದು, ಅನುದಾನಿತ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ತುಂಬಿಸುವಂಥ ಕ್ರಮವನ್ನು ಸರ್ಕಾರ ತಕ್ಷಣವೇ ಮಾಡಬೇಕು ಎನ್ನುವ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ.

ನಾನು ಮೂರನೆಯ ಪ್ರಶ್ನೆಯಲ್ಲಿ, ಅನುದಾನ ರಹಿತ, ಅನುದಾನಿತ ಮತ್ತು ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ನೀಡುವ ಸವಲತ್ತುಗಳಲ್ಲಿ ತಾರತಮ್ಯವಾಗುತ್ತಿದೆ ಎಂದು ಹೇಳಿದ್ದೆ. ನಾನು ತಮಗೆ ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ. ನಾನು ಇಂಗ್ಲಿಷ್ ಮಾಧ್ಯಮದ ಶಾಲೆಗಳ ಬಗ್ಗೆ ಹೇಳುತ್ತಿಲ್ಲ. ಕನ್ನಡ ಮಾಧ್ಯಮದ ಅನುದಾನ ರಹಿತ, ಅನುದಾನಿತ ಹಾಗೂ ಸರ್ಕಾರೀ ಶಾಲೆಗಳ ವಿದ್ಯಾರ್ಥಿಗಳಿಗೆ ಒಂದೇ ರೀತಿಯಾದ ಮಾನದಂಡವಿರಬೇಕು. ತಾವು ಅವರಿಗೆ ಸಮವಸ್ತ್ರ ಕೊಡುವಾಗ ಅಥವಾ ಪುಸ್ತಕಗಳನ್ನು ಒದಗಿಸುವಾಗ ಅದರಲ್ಲಿ ತಾರತಮ್ಯ ಮಾಡಿದರೆ ಹೇಗೆ? ಇವತ್ತು ಕನ್ನಡ ಮಾಧ್ಯಮದ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳನ್ನು ಮುಚ್ಚುವಂಥ ಪರಿಸ್ಥಿತಿಬರಬಹುದು. ಆದ್ದರಿಂದ, ತಾವು ವಿದ್ಯಾರ್ಥಿಗಳ ಬಗ್ಗೆ ತಾರತಮ್ಯ ಮಾಡಬೇಡಿ. ಏಕೆಂದರೆ, ತಮ್ಮ ಉತ್ತರದಲ್ಲಿ, ಎಲ್ಲರಿಗೂ ಸಮಾನಾಂತರವಾಗಿ ಮಾಡುವಂಥಾದ್ದು ಪರಿಶೀಲನೆಯಲ್ಲಿಲ್ಲ ಎಂದು ಹೇಳಿದ್ದೀರಿ. ಹತ್ತಿರ ಹತ್ತಿರ ಮನೆಗಳಲ್ಲಿ ಇರುವಂಥ ಮಕ್ಕಳು ಬೇರೆ ಬೇರೆ ಶಾಲೆಗಳಿಗೆ ಹೋಗುತ್ತಾರೆ. ಸರ್ಕಾರೀ ಶಾಲೆಗಳು ಇಲ್ಲದಿದ್ದ ಕಡೆಗಳಲ್ಲಿ ಬಡ ಮಕ್ಕಳು ಅನುದಾನಿತ ಅಥವಾ ಅನುದಾನ ರಹಿತ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ಆದ್ದರಿಂದ, ಅವರಿಗೂ ಸರ್ಕಾರೀ ಶಾಲೆಯ ವಿದ್ಯಾರ್ಥಿಗಳಂತೆ ಸವಲತ್ತುಗಳನ್ನು ಸಮಾನಾಂತರವಾಗಿ ಕೊಡುವೆಂಥಾದ್ದನ್ನು ತಾವು ಮಾಡಬೇಕು.

ಶ್ರೀ ರಾಮಲಿಂಗಾರೆಡ್ಡಿ: ಮಾನ್ಯ ಸದಸ್ಯರು ಮೊದಲನೆಯದಾಗಿ, ಅನುದಾನ ರಹಿತ ಶಾಲೆಯ ಶಿಕ್ಷಕರಿಗೆ ಉದ್ಯೋಗ ಭದ್ರತೆಯ ಬಗ್ಗೆ ಕೇಳಿದ್ದಾರೆ. ಅವರಿಗೆ ಉದ್ಯೋಗ ಭದ್ರತೆ ಇದೆ. ಎರಡನೇ ಪ್ರಶ್ನೆಯಲ್ಲಿ ಅವರಿಗೆ ಕನಿಷ್ಠ ವೇತನ ನೀಡುವ ಬಗ್ಗೆ ಕೂಡ ಕೇಳಿದ್ದಾರೆ. ಈ ಬಗ್ಗೆ ನಿನ್ನೆ ಕೂಡ ನಾನು ಮೇಲ್ಮನೆಯಲ್ಲಿ ರಿಪ್ಲೈ ಮಾಡಿದೆ. ಈ ರಾಜ್ಯದಲ್ಲಿ ಕೂಲಿ ಕಾರ್ಮಿಕರಿಗೆ ಕೂಡ ಕನಿಷ್ಠ ವೇತನ ಇದೆ. ಆದರೆ ಅನುದಾನ ರಹಿತ ಶಾಲೆಗಳಲಿ ಕನಿಷ್ಠ ವೇತನ ಕೂಡ ಇರಲಿಲ್ಲ. ಈಗ ಡ್ರಾಫ್ಟ್ ರೂಲ್ಸ್ ರೆಡಿಯಾಗಿದೆ. ಇನ್ನು 23 ತಿಂಗಳಲ್ಲಿ ಅವರಿಗೆ ಕನಿಷ್ಠ ವೇತನ ಸಿಗುವಂಥ ಕೆಲಸವನ್ನು ನಮ್ಮ ಇಲಾಖೆ ಮಾಡುತ್ತದೆ ಎಂದು ಹೇಳಲಿಚ್ಛಿಸುತ್ತೇನೆ. ಅದೇ ರೀತಿ ಅನುದಾನಿತ ಶಾಲೆಗಳಲ್ಲಿ ಶಿಕ್ಷಕರ ಖಾಲಿ ಹುದ್ದೆಗಳನ್ನು ತುಂಬುವ ಬಗ್ಗೆ ಕೇಳಿದ್ದಾರೆ. ಆ ಬಗ್ಗೆ ಅನುದಾನಿತ ಶಾಲೆಗಳಲ್ಲಿ ಬ್ಯಾನ್ ಇತ್ತು. ಈಗ ಆ ಬ್ಯಾನ್ ಲಿಫ್ಟ್ ಆಗಿದೆ. ಹೋದ ತಿಂಗಳು 9ನೇ ತಾರೀಖು ನಾನು ಮತ್ತು ಹಣಕಾಸಿನ ಸಚಿವರೂ ಆದ ಉಪ ಮುಖ್ಯಮಂತ್ರಿಗಳು ಜತೆಯಲ್ಲಿ ಮೀಟಿಂಗ್ ಮಾಡಿದ್ದೇವೆ. ಬ್ಯಾನ್ ಲಿಫ್ಟ್ ಆಗಿದೆ. ಸುಮಾರು 3000 ಹುದ್ದೆಗಳನ್ನು ಭರ್ತಿ ಮಾಡಬೇಕಾಗಿದ್ದು, ಅವುಗಳೆಲ್ಲವನ್ನೂ ಭರ್ತಿ ಮಾಡಿಕೊಳ್ಳಲು ನಾವು ಅನುಮತಿಯನ್ನು ಕೊಡುತ್ತೇವೆ. ಅವರ ಕೊನೆಯ ಪ್ರಶ್ನೆಗೆ ಉತ್ತರ, ಈಗ ಸದ್ಯಕ್ಕೆ ಆ ಪ್ರಸ್ತಾವನೆ ಇಲ್ಲ. ಏಕೆಂದರೆ, ಇದರಲ್ಲಿ ಸುಮಾರು 810 ಸಾವಿರ ಶಾಲೆಗಳು ಬರುತ್ತವೆ. ಆ 810 ಶಾಲೆಗಳಲ್ಲಿರುವ ಸುಮಾರು 2030 ಲಕ್ಷ ಮಕ್ಕಳಿಗೆ ಸವಲತ್ತುಗಳನ್ನು ಕೊಡಬೇಕಾಗುತ್ತದೆ. ಆದ್ದರಿಂದ, ಈಗ ಆ ಪ್ರಸ್ತಾವನೆ ನಮ್ಮ ಮುಂದೆ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅನುದಾನ ರಹಿತ ಶಾಲೆಗಳನ್ನು ಇಟ್ಟುಕೊಳ್ಳುವುದೋ, ತೆಗೆಯುವುದೋ ಎನ್ನುವ ಬಗ್ಗೆ ಒಂದು ಸೀರಿಯಸ್ ತೀರ್ಮಾನವಾಗಬೇಕು. ಆ ಬಗ್ಗೆ ಒಂದು ಇತ್ಯರ್ಥ ಮಾಡಬೇಕು. ಇವತ್ತು ಆ ಶಾಲೆಗಳಲ್ಲಿ ಶಿಕ್ಷಕರು, ಇವತ್ತಲ್ಲ, ನಾಳೆ ನಾವು ಗ್ರ್ಯಾಂಟ್‌ಗೆ ಸೇರುತ್ತೇವೆ ಎಂದು ಪಾಠ ಮಾಡುತ್ತಿರುವುದನ್ನು ಬಿಟ್ಟರೆ, ಬೇರೆ ಯಾವ ಆಸಕ್ತಿಯಿಂದಲೂ ಶಾಲೆಗಳನ್ನು ನಡೆಸುತ್ತಿಲ್ಲ. ಆದ್ದರಿಂದ ನೀವು ಹೇಳಿಬಿಡಬೇಕು. ನಾವು ಅನುದಾನ ಕೊಡುವುದಿಲ್ಲ. ನೀವು ಬೇಕಾದರೆ ಶಾಲೆಗಳನ್ನು ನಡೆಸಿಕೊಳ್ಳಿ. ಸಾಕಾದರೆ ಬಿಡಿ ಎಂದು ಹೇಳಬೇಕು. ಆದರೆ ಇವತ್ತು ಏನಾಗಿದೆ ಎಂದರೆ, ಕ್ಯಾಬಿನೆಟ್ ಸಬ್ ಕಮಿಟಿ ಮಾಡುತ್ತೀರಿ. ಎಸ್.ಸಿ., ಎಸ್.ಟಿ. ಯವರಿಗೆ ಕೊಡಬೇಕೇ ಎಂದು ಯೋಚನೆ ಮಾಡುತ್ತೀರಿ. ಕಟ್‌ಆಫ್ ಡೇಟ್‌ಗಳನ್ನು ಚೇಂಜ್ ಮಾಡುತ್ತೀರಿ; ಹಾಗಾಗಿ ಅವರು ಇವತ್ತಲ್ಲದಿದ್ದರೆ ನಾಳೆಯಾದರೂ ನಮಗೆ ಅನುದಾನ ಸಿಕ್ಕೇ ಸಿಗುತ್ತದೆ ಎನ್ನುವ ಭಾವನೆಯಲ್ಲಿದ್ದಾರೆ. ಹೀಗಾಗಿ ಒಂದು ಕಡೆ ಅವರು ರೆಗ್ಯುಲರ್ ಆಗಿ ಟೀಚಿಂಗ್ ಕೆಲಸವನ್ನೂ ಮಾಡುತ್ತಿಲ್ಲ. ಇನ್ನೊಂದು ಕಡೆ ಶಾಲೆಯನ್ನೂ ಮುಚ್ಚುತ್ತಿಲ್ಲ. ಎರಡನೆಯದಾಗಿ, ಅವರು ಹೇಳಿದ ಹಾಗೆ ಯೂನಿಫಾರಂಗಳನ್ನು ನೀಡುವುದು ಮತ್ತು ಮಿಡ್ ಡೇ ಮೀಲ್ ಕಾರ್ಯಕ್ರಮವನ್ನು ತಾವು ಏನು ಇಂಟ್ರಡ್ಯೂಸ್ ಮಾಡುತ್ತಿದ್ದೀರಿ. ಅದನ್ನು ಪ್ರೈವೇಟ್ ಸ್ಕೂಲುಗಳಿಗೂ ಕೊಡದಿದ್ದರೆ, ಗವರ್ನಮೆಂಟ್ ಸ್ಕೂಲುಗಳಿಗೆ ಫ್ಲಡ್ ಆಗುವ ವಿದ್ಯಾರ್ಥಿಗಳನ್ನು ತಡೆಯುವುದಕ್ಕಾಗುವುದಿಲ್ಲ. ಹೀಗಾಗಿ, ಒಂದು ಕಡೆ ಸ್ಟಾಫ್ ಐಡಲ್ ಆಗುತ್ತದೆ. ಇನ್ನೊಂದು ಕಡೆ ಎಲ್ಲರಿಗೂ ಅಡ್ಮಿಷನ್ ಕೊಡುವುದಕ್ಕಾಗುವುದಿಲ್ಲ. ಇದನ್ನು ರಿವ್ಯೂ ಮಾಡಬೇಕಾದುದು ಒಳ್ಳೆಯದು ಎಂದು ನನ್ನ ಭಾವನೆ.

ಶ್ರೀ ಕೆ. ರಘುಪತಿ ಭಟ್: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಚಿವರು ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನನಗೆ ಸಂಶಯ ಇರುವಂಥಾದ್ದು ಏನೆಂದರೆ, ಎರಡನೆಯ ಪ್ರಶ್ನೆಗೆ ತಾವು ಉತ್ತರ ಕೊಡುವಾಗ, ಕಾರ್ಯ ನಿರ್ವಹಣೆಯ ಮೌಲ್ಯಮಾಪನ ಅವಲಂಬಿಸಿ ಅನುಮತಿ ನೀಡಲಾಗುವುದು ಎಂದು ಹೇಳಿದ್ದೀರಿ. ಶಿಕ್ಷಕರ ಕೊರತೆ ಇರುವ ಈ ಸಂದರ್ಭದಲ್ಲಿ ಪುನಃ ಯಾವುದಾದರೂ ಶಾಲೆಗೆ ಈ ನೆಪದಲ್ಲಿ ನಿಲ್ಲಿಸುವಂಥಾದ್ದು, ನಿರ್ಬಂಧ ಹಾಕುವಂಥಾದ್ದು ಮಾಡಬಾರದು. ಮೌಲ್ಯಮಾಪನ ಮಾಡುವಂಥಾದ್ದು ಎಂದು ಸೇರಿಸಿದ್ದೀರಿ. ಇದು ಏನೆಂದು ನನಗೆ ಅರ್ಥವಾಗಲಿಲ್ಲ.

ಶ್ರೀ ರಾಮಲಿಂಗಾರೆಡ್ಡಿ: ಮಾನ್ಯ ಅಧ್ಯಕ್ಷರೇ, ಎಸ್.ಸಿ., ಎಸ್.ಟಿ. ಶಾಲೆಗಳಿಗೂ ಕೂಡ ನಾವು ಅನುಮತಿ ಕೊಡುವಾಗ ಕೆಲವು ವಿಚಾರಗಳನ್ನು ನೋಡುತ್ತೇವೆ. ಸ್ಟೆಂತ್, ಇನ್‌ಫ್ರಾಸ್ಟ್ರಕ್ಚರ್ ಇದೆಯೋ ಇಲ್ಲವೋ, ರೋಸ್ಟರ್ ಸಿಸ್ಟಂ ಫಾಲೋ ಮಾಡುತ್ತಿದ್ದಾರೆಯೋ, ಇಲ್ಲವೋ, ಹೀಗೆ ಇತ್ಯಾದಿ ವಿಚಾರಗಳನ್ನು ನೋಡುತ್ತೇವೆ. ಇಲ್ಲೂ ಕೂಡ ಅಷ್ಟೇ. ಕೆಲವು ಫಾರ್ಮಾಲಿಟಿಗಳನ್ನು ಮಾಡಿ ಅನುಮತಿ ಕೊಡುತ್ತೇವೆ. ಇದು ಕ್ಲಿಯರ್ ಆಗಿದೆ. ಏನೂ ಸಮಸ್ಯೆಯಿಲ್ಲ.

ಪ್ರಶ್ನೆ ಸಂಖ್ಯೆ 651 (6587)

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಪ್ರಶ್ನೆ ಸಂಖ್ಯೆ 652 (6648))

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಸವಣೂರು ಹಾಗೂ ಶಿಗ್ಗಾಂವ್ ತಾಲ್ಲೂಕುಗಳಲ್ಲಿ ಜಮೀನುಗಳಿಗೆ ಹೋಗುವ ರಸ್ತೆಗಳ ಅಭಿವೃದ್ಧಿಪಡಿಸುವುದು.

653 (6577) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವಣೂರ ಹಾಗೂ ಶಿಗ್ಗಾಂವ ಪಟ್ಟಣ ಹಾಗೂ ಈ ಎರಡೂ ತಾಲ್ಲುಕುಗಳಲ್ಲಿ ಬರುವ ಗ್ರಾಮಾಂತರ ಪ್ರದೇಶದಲ್ಲಿನ ಜಮೀನುಗಳ ಸರ್ಕಾರಿ ರಸ್ತೆಗಳು ತೀರಾ ಹದಗೆಟ್ಟಿರುವುದರಿಂದ ರೈತರು ತಮ್ಮ ಕೃಷಿ ಚಟುವಟಿಕೆಯನ್ನು ಮಾಡಲು ಸಾಕಷ್ಟು ತೊಂದರೆಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಈ ರಸ್ತೆಗಳ ದುರಸ್ತಿಗೆ ಯಾವ ಯೋಜನೆಯಡಿಯಲ್ಲಿ ಕ್ರಮ ಕೈಗೊಂಡಿದೆ;

ಇ) ಬಂದಿದ್ದಲ್ಲಿ ಈ ರಸ್ತೆಗಳ ಸುಧಾರಣೆಯ ಅತೀ ಅವಶ್ಯವಿದ್ದು; ರೈತರಿಗೆ ಅನುಕೂಲ ಮಾಡಿಕೊಡುವ ಯೋಜನೆಗಳನ್ನೇನಾದರೂ ಹಮ್ಮಿ ಕೊಂಡಿದೆಯೇ;

ಈ) ಹಾಗಿದ್ದಲ್ಲಿ, ಈ ಯೋಜನೆಗಳಿಗೆ ತೀವ್ರವಾಗಿ ಅನುದಾನ ಬಿಡುಗಡೆಗೊಳಿಸಿ ಕಾರ್ಯರೂಪಕ್ಕೆ ತರಲು ಸರ್ಕಾರ ಎಷ್ಟು ಕಾಲಾವಕಾಶದಲ್ಲಿ ಯೋಗ್ಯ ಕ್ರಮ ಕೈಗೊಳ್ಳುತ್ತದೆ?

ಡಾ॥ ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಅ) ಬಂದಿದೆ.